**ಸಾಕ್ಷಿಯನ್ನು ದಿನಾಂಕಃ 11-02-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ದಿನಾಂಕಃ 30-04-2024 ರಂದು ಶ್ವಾನ ದಳ ಮತ್ತು ಬೆರಳು ಮುದ್ರೆ ತಜ್ಞರು ಸ್ಥಳ ಪರೀಶೀಲನೆ ಕಾಲಕ್ಕೆ ಪಂಚನಾಮೆಯನ್ನು ತಯಾರಿಸಿದ್ದು ಈಗ ಅದನ್ನು ನೋಡುತ್ತಿದ್ದು ನಿಪಿ-5 ಎಂದು, ಸಾಕ್ಷಿ ಸಹಿಯನ್ನು ನಿಪಿ-5(ಎ)ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಫೋಟೋವನ್ನು ನೋಡುತ್ತಿದ್ದು ನಿಪಿ-6 ಎಂದು ಗುರುತಿಸಲಾಯಿತು.

ದೂರು ನೀಡುವ ಕಾಲಕ್ಕೆ 296 ಗ್ರಾಂ ತೂಕದ ಬಂಗಾರದ ಆಭರಣಗಳು ಮತ್ತು 22.5 ಕೆ. ಜಿ. ಬೆಳ್ಳಿ ಆಭರಣಗಳು ಕಳ್ಳತನವಾಗಿರುವುದಾಗಿ ನಮೂದಿಸಿದ್ದು ತದನಂತರ ಲಾಕರ್ ಮತ್ತು ಅಲ್ಮೆರಾಗಳನ್ನು ಪರಿಶೀಲಿಸಿದಾಗ ನಿಖರವಾಗಿ ಯಾವೆಲ್ಲ ಬೆಳ್ಳಿ ಮತ್ತು ಬಂಗಾರಗಳು ಕಳುವಾಗಿದ್ದವು ಎಂಬುದು ಕಂಡುಬಂದಿದ್ದರಿಂದ ಈಗಾಗಲೇ ದೂರಿನಲ್ಲಿ ಹೇಳಿದ್ದು ಗಾಬರಿಯಿಂದ ನೀಡಿದ್ದಾಗಿದ್ದರಿಂದ ದಿನಾಂಕ 01-05-2024 ರಂದು ಪೋಲೀಸ್ ಠಾಣೆಗೆ ಭೇಟಿ ನೀಡಿ ಕಳುವಾಗಿದ್ದ ನಿಖರವಾದ ಮಾಹಿತಿಯನ್ನು ಮರುಹೇಳಿಕೆಯಲ್ಲಿ ನೀಡಿರುತ್ತೇನೆ. ನಮ್ಮ ಅಂಗಡಿಯಿಂದ ಸುಮಾರು 92 ಗ್ರಾಂ ತೂಕದ ಬಂಗಾರದ ಆಭರಣಗಳು ಮತ್ತು 5 ಕೆಜಿ 227 ಗ್ರಾಂ ತೂಕದ ಬೆಳ್ಳಿ ಆಭರಣಗಳು ಕಳ್ಳತನವಾಗಿದ್ದು ಸದರಿ ಆಭರಣಗಳ ಬಿಲ್ಲುಗಳನ್ನು ಪೋಲೀಸ್ ಠಾಣೆಯಲ್ಲಿ ಹಾಜರುಪಡಿಸಿರುತ್ತೇನೆ. ಈಗ 2 ಇನವೈಸಗಳನ್ನು ನೋಡುತ್ತಿದ್ದು ನಿಪಿ-7 ಮತ್ತು 8 ಎಂದು ಗುರುತಿಸಲಾಯಿತು.

ದಿನಾಂಕ 10-05-2024 ರಂದು ಪೋಲೀಸರು ಕಳುವಾಗಿದ್ದ ಒಡವೆಗಳನ್ನು ಹುಡುಕಿರುವುದಾಗಿ ಮತ್ತು ಆರೋಪಿಗಳನ್ನು ಪತ್ತೆ ಹಚ್ಚಿರುವುದಾಗಿ ಹೇಳಿ 1 ಮತ್ತು 2 ನೇ ಆರೋಪಿತರನ್ನು ಘಟನಾ ಸ್ಥಳಕ್ಕೆ ಪಂಚನಾಮೆಗೆ ಕರೆದುಕೊಂಡು ಬಂದಿದ್ದು ಆರೋಪಿತರು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ. ಆ ಕಾಲಕ್ಕೆ ನಾನು ಅವರನ್ನು ನೋಡಿದ್ದು ಸದರಿ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಅಂಗಡಿಯಲ್ಲಿ ಕಳುವಾದ ಒಡವೆಗಳನ್ನು ನೋಡಿದರೆ ಗುರುತಿಸುತ್ತೇನೆ. ಒಡವೆಗಳ ಮಧ್ಯಂತರ ಸ್ವಾಧೀನಕ್ಕೆ ನೀಡುವ ಕಾಲಕ್ಕೆ ತೆಗೆದ ಫೋಟೋಗಳಲ್ಲಿರುವ ಒಡವೆಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ-9 ರಿಂದ 18 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ 2, 3 ಮತ್ತು 6 ನೇ ಆರೋಪಿಗಳ ಪರ ಶ್ರೀ ವಿ.ಆರ್.ಎನ್. ವಕೀಲರಿಂದ,**

ಅಂಗಡಿಯು ನನ್ನ ಬಾವ ವಿನಾಯಕ ಶೇಟ್ ರವರ ಹೆಸರಿನಲ್ಲಿದೆ. ಅಂಗಡಿಯನ್ನು ಸಂಪೂರ್ಣವಾಗಿ ನಾನೇ ನೋಡಿಕೊಳ್ಳುತ್ತೇನೆ. ನಮ್ಮ ಬಾವನವರು ವಾರಕ್ಕೆ ಒಂದು ಬಾರಿ ಬಂದು ಹೋಗುತ್ತಾರೆ. ಅಂಗಡಿ ನೋಡಿಕೊಳ್ಳಲು ಬಾವನವರು ಲಿಖಿತವಾಗಿ ನನಗೆ ಯಾವುದೇ ಅಧಿಕಾರ ಕೊಟ್ಟಿಲ್ಲ. ಅವರು ಬಾವ ಆಗಿರುವುದರಿಂದ ನಾನು ನೋಡಿಕೊಳ್ಳುತ್ತೇನೆ. ಅಂಗಡಿಗೆ ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಪ್ರತಿನಿತ್ಯ ಅಂಗಡಿಗೆ ಎಷ್ಟು ಬಂಗಾರ ಬರುತ್ತದೆ, ಎಷ್ಟು ವ್ಯಾಪಾರ ಆಗುತ್ತದೆ ಮತ್ತು ಎಷ್ಟು

ಉಳಿದಿರುತ್ತದೆ ಎಂಬುದನ್ನು ರಜಿಸ್ಟರನಲ್ಲಿ ನಮೂದಿಸುತ್ತೇವೆ. ದಿನಾಂಕ 29-04-2024 ರಂದು ಅಂಗಡಿಗೆ ಬಾಗಿಲು ಹಾಕುವ ಮೊದಲು ಎಷ್ಟು ಬಂಗಾರ ಮತ್ತು ಬೆಳ್ಳಿ ಸ್ಟಾಕ್ ಇತ್ತು ಎಂಬ ಬಗ್ಗೆ ರಜಿಸ್ಟರನಲ್ಲಿ ಬರೆದಿರುತ್ತೇನೆ. ನಾನು ಅಂಗಡಿಗೆ ಹೋಗುವ ಮೊದಲೇ ಯಾರೂ ಕಳ್ಳತನ ಆಗಿದೆ ಅಂತ ಫೋನ್ ಮಾಡಿಲ್ಲ. ನಾನು ಅಂಗಡಿಗೆ ಹೋದಾಗ ಗೊತ್ತಾಗಿರುತ್ತದೆ. ಸಾಮಾನ್ಯವಾಗಿ ಅಂಗಡಿಗೆ ಬೆಳಿಗ್ಗೆ 9-30 ಕ್ಕೆ ಹೋಗುತ್ತೇನೆ. ಸಾಮಾನ್ಯವಾಗಿ ರಾತ್ರಿ 08-30 ಕ್ಕೆ ಅಂಗಡಿಗೆ ಬಾಗಿಲು ಹಾಕುತ್ತೇನೆ. ದಿನಾಂಕ 30-04-2024 ರಂದು ನಾನು ಬೆಳಿಗ್ಗೆ 06-30 ಕ್ಕೆ ವಾಕಿಂಗ್ ಹೋಗುತ್ತಿದ್ದಾಗ ಅಂಗಡಿಯ ಗೇಟ್ ಮುರಿದಿರುವುದು ಕಂಡುಬಂದಿರುತ್ತದೆ. ನಮ್ಮ ಅಂಗಡಿಯ ಪಕ್ಕದಲ್ಲಿ ಒಂದು ಸ್ಟೇಶನರಿ ಅಂಗಡಿ ಇದೆ, ಅದರ ಪಕ್ಕದಲ್ಲಿ ಮೊಬೈಲ್ ಅಂಗಡಿ ಇದೆ. ನಾನು ಹೋದಾಗ ಶೆಟರ್ಸ ಅರ್ಧ ತೆರೆದಿತ್ತು. ಲಾಕ್ ಓಪನ್ ಆಗಿತ್ತು. ಶಟರ್ಸ ಬೀಗ ಮುರಿದಿದ್ದರಿಂದ ನಾನು ಈ ವಿಷಯವನ್ನು ಮೊದಲು ಬಾವನವರಿಗೆ ತಿಳಿಸಿರುತ್ತೇನೆ ನಂತರ ಪೋಲೀಸರಿಗೆ ತಿಳಿಸಿರುತ್ತೇವೆ. ಬೆಳಿಗ್ಗೆ 10-00 ಗಂಟೆ ಸುಮಾರಿಗೆ ಪೋಲೀಸ್ ಠಾಣೆಗೆ ಹೋಗಿರುತ್ತೇವೆ. ದೂರು ಕೊಡುವ ಮೊದಲೇ ಪೋಲೀಸರು ಸ್ಥಳಕ್ಕೆ ಬಂದಿರಲಿಲ್ಲ. ಅಂಗಡಿಗೆ ಹೋದಾಗ ನಾನು ಅಕ್ಕಪಕ್ಕ ಏನನ್ನೂ ಮುಟ್ಟಲಿಲ್ಲ. ದೂರನ್ನು ನಾನೇ ಬರೆದಿರುತ್ತೇನೆ. ಅದನ್ನು ಹೀಗೆ ಬರೆಯಬೇಕು ಎಂದು ಪೋಲೀಸರು ಮಾಹಿತಿ ನೀಡಲಿಲ್ಲ. ರಾತ್ರಿ ಅಂಗಡಿ ಬಾಗಿಲು ಹಾಕುವಾಗ ಯಾವೆಲ್ಲ ಒಡವೆಗಳನ್ನು ಇಟ್ಟಿರುತ್ತೇವೆ ಎಂಬುದು ನೆನಪಿರುತ್ತದೆ, ಅದರ ಆಧಾರದಲ್ಲಿ ದೂರಿನಲ್ಲಿ 20 ಐಟಂ ಒಡವೆಗಳ ವಿವರವನ್ನು ಬರೆದಿರುತ್ತೇನೆ. ದೂರು ಕೊಡುವ ಕಾಲಕ್ಕೆ ನಾವು ಸ್ಟಾಕ್ ಇಡುವ ಪಟ್ಟಿಯನ್ನು ಪೋಲೀಸರಿಗೆ ಕೊಟ್ಟಿರಲಿಲ್ಲ. ಕಳ್ಳತನ ಆದ ಗಾಬರಿಯಲ್ಲಿ ನಾನು ಆ ಪಟ್ಟಿಯನ್ನು ಪೋಲೀಸರಿಗೆ ಕೊಟ್ಟಿರಲಿಲ್ಲ. ಮರುದಿನವೂ ಸಹ ಕೊಟ್ಟಿಲ್ಲ. ಆದರೆ ವಿವರವನ್ನು ಮರು ಹೇಳಿಕೆಯಲ್ಲಿ ಹೇಳಿದ್ದೇನೆ. ಶ್ವಾನದಳದವರು ಬಂದು ಪರಿಶೀಲನೆ ಮಾಡಿದ ನಂತರ ಅಂಗಡಿಯ ಲಾಕರ್ ತೆರೆದಾಗ ಅದರಲ್ಲಿದ್ದ ಒಡವೆಗಳು ಕಳ್ಳತನವಾಗಿಲ್ಲವಾದ್ದರಿಂದ ನೈಜವಾಗಿ ಎಷ್ಟು ಕಳ್ಳತನವಾಗಿತ್ತೋ ಅದರ ವಿವರವನ್ನು ಮರುಹೇಳಿಕೆಯಲ್ಲಿ ಹೇಳಿದ್ದೇನೆ.

ಶ್ವಾನದಳ ಬಂದಾಗ ಪಂಚನಾಮೆಯನ್ನು ಸ್ಥಳದಲ್ಲೇ ಮಾಡಿರುತ್ತಾರೆ. ಪಂಚನಾಮೆ ಬರೆಯಲು ನಾನು ಮಾಹಿತಿ ಕೊಟ್ಟಿಲ್ಲ. ಲಾಕರ್ ಮತ್ತು ಡ್ರಾಯರ್ ಎಲ್ಲಿದೆ ಅಂತ ಪಂಚನಾಮೆ ಕಾಲಕ್ಕೆ ನಾನು ತೋರಿಸಿದ್ದೇನೆ. ಶ್ವಾನದಳ ಪಂಚನಾಮೆಯ ಕಾಲಕ್ಕೆ ಚಾಸಾ-2 ಮತ್ತು 3 ಹಾಜರಿದ್ದು ಸಹಿ ಮಾಡಿರುತ್ತಾರೆ. ಸದರಿ ಪಂಚನಾಮೆಗೆ ಪೋಲೀಸ್ ಸಿಬ್ಬಂದಿಗಳ ಸಹಿ ತೆಗೆದುಕೊಂಡಿದ್ದಾರೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಶ್ವಾನವು ಅಂಗಡಿಯ ಸುತ್ತ ಸುತ್ತಾಡಿ ನಂತರ ಮೀನು ಮಾರುಕಟ್ಟೆವರೆಗೆ ಹೋಗಿರುತ್ತದೆ. ನಾನು ಕೂಡ ಅದರ ಜೊತೆಯಲ್ಲೇ ಹೋಗಿ ನೋಡಿರುತ್ತೇನೆ. ಅಂಗಡಿಯಲ್ಲಿ ಪಂಚನಾಮೆಯನ್ನು ಟೈಪ್ ಮಾಡಲಾಗಿರುತ್ತದೆ. ಬೆರಳಚ್ಚು ಮುದ್ರಣ ತಜ್ಞರು ಟೇಬಲ್ ಮೇಲೆ ಮತ್ತು ಲಾಕರ್ ಮೇಲೆ, ಕಬೋರ್ಡ ಮೇಲೆ ಪೌಡರನ್ನು ಹಾಕಿ ಅವರ ಪದ್ಧತಿ ರೀತ್ಯಾ ಬೆರಳಚ್ಚು ಮುದ್ರೆ ತೆಗೆದುಕೊಂಡಿರುತ್ತಾರೆ. ನಾನು ಅದನ್ನು ನೋಡಿರುತ್ತೇನೆ. 1 ಮತ್ತು 2 ನೇ ಆರೋಪಿತರನ್ನು ಅಂಗಡಿಗೆ ಕರೆದುಕೊಂಡು ಬರುವ ಪೂರ್ವದಲ್ಲಿ ನನ್ನನ್ನು ಪೋಲೀಸ್ ಠಾಣೆಗೆ ಕರೆದಿರಲಿಲ್ಲ. ಆದರೆ ತದನಂತರ ಒಡವೆ ತೋರಿಸಲು ಕರೆದಿದ್ದರು. 1 ಮತ್ತು 2 ನೇ ಆರೋಪಿತರನ್ನು ನಮ್ಮ ಅಂಗಡಿಗೆ ಕರೆದುಕೊಂಡು ಬಂದಾಗ ಅವರು

ಯಾರ ರೀತಿ ಕಳ್ಳತನ ಮಾಡಿದ್ದೇವೆ ಅಂತ ಪೋಲೀಸರಿಗೆ ಹೇಳುತ್ತಿದ್ದರು. ನನಗೂ ಆರೋಪಿತರಿಗೂ ಯಾವುದೇ ಮಾತುಕತೆ ಆಗಲಿಲ್ಲ. ಅಂಗಡಿಗೆ ಕರೆದುಕೊಂಡು ಬಂದ 1 ಮತ್ತು 2 ನೇ ಆರೋಪಿತರು ನನಗೆ ಪರಿಚಯ ಇರಲಿಲ್ಲ. ಅವರ ಹೆಸರನ್ನು ಪೋಲೀಸ್ ಠಾಣೆಯಲ್ಲಿ ಪೋಲೀಸರು ಹೇಳಿರುತ್ತಾರೆ. ಆರೋಪಿತರನ್ನು ಅಂಗಡಿಗೆ ಕರೆದುಕೊಂಡು ಬಂದ ದಿನವೇ ಪೋಲೀಸ್ ಠಾಣೆಗೆ ಹೋಗಿರುತ್ತೇನೋ ಅಥವಾ ತದನಂತರ ಹೋಗಿರುತ್ತೇನೋ ನೆನಪಿಲ್ಲ. ನಾನು ಪೋಲೀಸ್ ಠಾಣೆಗೆ ಹೋದಾಗ ಒಡವೆಗಳನ್ನು ಪೋಲೀಸರು ಫೋಟೋದ ಮೂಲಕ ತೋರಿಸಿರುತ್ತಾರೆ. ನನ್ನನ್ನು ಆರೋಪಿತರನ್ನು ನಿಲ್ಲಿಸಿ ಠಾಣೆಯಲ್ಲಿ ಯಾವುದೇ ಫೋಟೋ ತೆಗೆಯಲಿಲ್ಲ. ಪೋಲೀಸ್ ಠಾಣೆಗೆ ಹೋದಾಗ ಸಮಯ ಎಷ್ಟಾಗಿತ್ತು ಹೇಳಲಿಲ್ಲ. ಫೋಟೋದಲ್ಲಿರುವ ಒಡವೆಗಳು ಎಲ್ಲಿವೆ ಎಂದು ನಾನು ಪೋಲೀಸರನ್ನು ಕೇಳಲಿಲ್ಲ. ಆದರೆ ತದನಂತರದಲ್ಲಿ ಒಡವೆಗಳನ್ನು ನೇರವಾಗಿ ತೋರಿಸಿದ್ದಾರೆ, ಯಾವಾಗ ಅಂತ ನೆನಪಿಲ್ಲ. ಅದು ಒಂದು ವಾರದ ನಂತರ ಇರಬಹುದು. ಒಡವೆ ತೋರಿಸುವ ಕಾಲಕ್ಕೆ ಪೋಲೀಸರು ನನ್ನ ಫೋಟೋ ತೆಗೆದಿಲ್ಲ. ಅಂಗಡಿಗೆ ಇನ್ಸುರನ್ಸ ಮಾಡಿಸಲಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆರೋಪಿತರಿಗೂ ನಮ್ಮ ಅಂಗಡಿಯಲ್ಲಿ ಕಳುವಾದ ಒಡವೆಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಂದ ನಮ್ಮ ಯಾವುದೇ ಒಡವೆಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ- 7 ನೇ ಆರೋಪಿ ಪರ ವಕೀಲರಾದ ಶ್ರೀ ಎಂ. ಎನ್. ಸುಬ್ರಹ್ಮಣ್ಯರಿಂದಃ**

ನಾನು ಬಂಗಾರದ ಅಂಗಡಿಯಲ್ಲಿ ಸಂಬಂಧದ ಆಧಾರದಲ್ಲಿ ಕೆಲಸ ಮಾಡುತ್ತಿದ್ದೇನೆ. ನಮ್ಮ ಬಾವ ನನಗೆ ಕೇಳಿದಾಗ ಹಣ ಕೊಡುತ್ತಾರೆ. ತಿಂಗಳಿಗೆ ಇಂತಿಷ್ಟು ಅಂತ ಏನೂ ಕೊಡುವುದಿಲ್ಲ. ಅಂಗಡಿಯಲ್ಲಿ ಒಡವೆಗಳನ್ನು ತಂದು ಮಾರಾಟ ಮಾಡಲಾಗುತ್ತದೆ ಹಾಗೂ ಒಡವೆಗಳನ್ನು ಅಂಗಡಿಯಲ್ಲೇ ತಯಾರು ಮಾಡಿ ಕೊಡುತ್ತೇವೆ. ಎಷ್ಟು ಬಂಗಾರ ವ್ಯಾಪಾರ ಆಗಿತ್ತು ಎಂಬ ಬಗ್ಗೆ ರಜಿಸ್ಟರನಲ್ಲಿ ನಮೂದು ಮಾಡಲಾಗಿದ್ದು ಸದರಿ ರಜಿಸ್ಟರನ್ನು ಪೋಲೀಸರಿಗೆ ಕೊಡಲಾಗಿತ್ತು. ಅಂಗಡಿಯ ಜಿಎಸ್‌ಟಿ ಬಗ್ಗೆ ಸರಕಾರದ ಅನುಮತಿ ಬಗ್ಗೆ ಬಾವನವರು ನೋಡಿಕೊಳ್ಳುತ್ತಿದ್ದರು. ಪಂಚನಾಮೆ ತಯಾರು ಮಾಡುವ ಕಾಲಕ್ಕೆ ಪಂಚರು ಹೇಳಿದಂತೆ ಪೋಲಿಸರು ತಯಾರು ಮಾಡಿರುತ್ತಾರೆ. ಪಂಚನಾಮೆಯ ಕಾಲಕ್ಕೆ ಯಾವ ಯಾವ ಸ್ಥಳದಲ್ಲಿ ಯಾವ ಯಾವ ಒಡವೆಗಳನ್ನು ಯಾವ ಜಾಗದಲ್ಲಿ ಇರಿಸಲಾಗಿತ್ತು ಎಂಬ ಮಾಹಿತಿಯನ್ನು ನಾನು ಹೇಳಿದ್ದೇನೆ. ಪ್ರತಿನಿತ್ಯ ಆಚೆ ಇಡುವ ಒಡವೆಗಳನ್ನು ಮತ್ತು ಬೆಳ್ಳಿ ಒಡವೆಗಳನ್ನು ಆ ದಿನ ಕಬ್ಬಿಣದ ಕಪಾಟಿನಲ್ಲಿ ಇಡಲಿಲ್ಲ. ಹಾಗೆಯೇ ಇಟ್ಟಿದ್ದೆವು. ವ್ಯಾಪಾರ ಆಗುವ ಕಾಲಕ್ಕೆ ತೂಕ ಹೆಚ್ಚು ಕಡಿಮೆ ಆಗಿ ಅದನ್ನು ಸರಿಪಡಿಸಲು ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ. **Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**